ಆಡಿಷನ್‌ಗೆ ಹೋಗಿ ಆಯ್ಕೆಯೂ ಆದರು. ಅದಾದ ನಂತರ ಒಂದು ತೆಲುಗು ಧಾರಾವಾಹಿಯಲ್ಲಿ ಮುಖ್ಯಪಾತ್ರದಲ್ಲಿ ನಟಿಸುವ ಅವಕಾಶ ಸಿಕ್ಕಿತು. ಆ ಧಾರಾವಾಹಿ ದೀಪಿಕಾಗೆ ಸಾಕಷ್ಟು ಜನಪ್ರಿಯತೆ ತಂದುಕೊಟ್ಟಿದ್ದಲ್ಲದೇ, ಈ ಟೀವಿ ಕೊಡುವ 'ಅತ್ಯುತ್ತಮ ನಟಿ' ಪ್ರಶಸ್ತಿಯನ್ನೂ ತಂದುಕೊಟ್ಟಿತು.

ಕಿರುತೆರೆ ಮತ್ತು ಸೋಷಿಯಲ್ ಮೀಡಿಯಾದಲ್ಲಿ ತಮ್ಮ ಪ್ರತಿಭೆಯನ್ನು ಸಾಬೀತುಗೊಳಿಸಿರುವ ದೀಪಿಕಾ ಈಗ ಸಿನಿಮಾ ಕ್ಷೇತ್ರದಲ್ಲಿ ಅದೃಷ್ಟಪರೀಕ್ಷೆಗಿಳಿದಿದ್ದಾರೆ.

ಲಾಕ್‌ಡೌನ್‌ಗಿಂತಲೂ ಮೊದಲು ಪ್ರಭು ಶ್ರೀನಿವಾಸ್ ಅವರ ನಿರ್ದೇಶನದ ಕಾಮಿಡಿ ಸಸ್ಪೆನ್ಸ್ ಸಿನಿಮಾವೊಂದರಲ್ಲಿ ನಟಿಸಿದ್ದಾರೆ. ಇನ್ನೂ ಹೆಸರಿಡದ ಆ ಸಿನಿಮಾವೇ ಇವರ ಮೊದಲ ಸಿನಿಮಾ.

ಯೋಗರಾಜ್ ಭಟ್ಟರ ಗರಡಿಯಲ್ಲಿ ಪಳಗಿರುವ ಪ್ರವೀಣ್‌ಕುಮಾರ್ ಜಿ. ಅವರ ನಿರ್ದೇಶನದ, 'ಅಮರ ಪ್ರೇಮಿ ಅರುಣ್', ದೀಪಿಕಾ ಅವರ ಎರಡನೇ ಸಿನಿಮಾ. ಈ ಚಿತ್ರದ ಕುರಿತು ಅವರು ಉತ್ಸಾಹದಿಂದಲೇ ಮಾತಾಡುತ್ತಾರೆ.

'ಚಿತ್ರದ ಕಥೆ ಕೇಳಿ ತುಂಬ ಥ್ರಿಲ್ ಆಯಿತು. ಅಷ್ಟು ಚೆನ್ನಾಗಿದೆ. ಖುಷಿಯಿಂದಲೇ ಒಪ್ಪಿಕೊಂಡೆ. ಇದರಲ್ಲಿ ನನ್ನ ಪಾತ್ರದ ಹೆಸರು ಕಾವ್ಯ. ಬಳ್ಳಾರಿಯಲ್ಲಿ ನಡೆಯುವ ಕಥೆ. ಹಾಗಾಗಿ ಅಲ್ಲಿನ ಸೊಗಡಿನ ಕನ್ನಡವನ್ನು ಕಲಿತುಕೊಳ್ಳಬೇಕಾಗಿತ್ತು. ಅದಕ್ಕಾಗಿ ವರ್ಕ್‌ಷಾಪ್‌ಗಳನ್ನು ಮಾಡಿದ್ದೇವೆ. ಈಗ ಒಂದು ಮಟ್ಟಿಗೆ ಆ ಭಾಷೆ ಕಲಿತುಕೊಂಡಿದ್ದೇನೆ. ಇನ್ನೂ ಪ್ರಯತ್ನಪಡುತ್ತಲೂ ಇದ್ದೇನೆ' ಎನ್ನುತ್ತಾರೆ ದೀಪಿಕಾ.

ನಟಿ ಸೌಂದರ್ಯ ಎಂದರೆ ದೀಪಿಕಾ ಕಣ್ಣುಗಳು ಅರಳುತ್ತವೆ. 'ಅವರು ನನ್ನ ನೆಚ್ಚಿನ ನಟಿ. ಅವರು ನಟಿಸಿದ ಸಿನಿಮಾಗಳು, ಅವರ ಪಾತ್ರಗಳು, ಅವರು ಆ ಪಾತ್ರಕ್ಕೆ ಜೀವತುಂಬುವ ರೀತಿ ಎಲ್ಲವೂ ನನಗಿಷ್ಟ. ಅಂಥ ನಟನಾಪ್ರಧಾನ ಪಾತ್ರಗಳಲ್ಲಿಯೇ ನಾನೂ ನಟಿಸಬೇಕು' ಎನ್ನುವ ದೀಪಿಕಾ ಪ್ರಕಾರ, ಯಾವುದೇ ಪಾತ್ರಕ್ಕೆ ಜೀವ ತುಂಬುವುದೇ ನಟನೆಯ ವ್ಯಾಖ್ಯಾನ.

ಫಿಟ್‌ನೆಸ್ ಬಗ್ಗೆ ಇನ್ನಿಲ್ಲದ ಆಸ್ಥೆ ವಹಿಸುವ ದೀಪಿಕಾ ದಿನಕ್ಕೆ ಕನಿಷ್ಠ ಒಂದು ಗಂಟೆ ವರ್ಕೌಟ್ ಮಾಡುತ್ತಾರೆ. ಸಕ್ಕರೆಯುಕ್ತ ಆಹಾರದಿಂದ ಅವರು ಮಾರು ದೂರ. ನಟನೆಯ ಪ್ರತಿಭೆಯ ಜೊತೆಗೆ ದೇಹವನ್ನು ಚೆನ್ನಾಗಿ ಇಟ್ಟುಕೊಳ್ಳುವುದೂ ಮುಖ್ಯ ಎನ್ನುವುದು ಅವರ ನಂಬಿಕೆ.

ಈಗಾಗಲೇ ಇನ್ನೂ ಎರಡು ಸಿನಿಮಾಗಳಲ್ಲಿ ನಟಿಸುವ ಅವಕಾಶ ದೀಪಿಕಾ ಅವರನ್ನು ಅರಸಿಕೊಂಡು ಬಂದಿವೆ. ಕೊರೊನಾ ಆಪತ್ತು ಮುಗಿದು ಚಿತ್ರರಂಗ ಮತ್ತೆ ಕಾರ್ಯಾರಂಭ ಮಾಡಿದಾಗ ಖಂಡಿತ ತನಗೆ ಇನ್ನಷ್ಟು ಒಳ್ಳೆಯ ಅವಕಾಶಗಳು ಸಿಗುತ್ತವೆ ಎಂಬ ನಂಬಿಕೆಯಲ್ಲಿ ಅವರಿದ್ದಾರೆ. ■



# ಪೆಪೆ ಎಂಬ ಗ್ಯಾಂಗ್‌ಸ್ಟರ್ ಕಥೆ!

ಈಗಾಗಲೇ ಎರಡು ಇಂಡಿಪೆಂಡೆಂಟ್ ಸಿನಿಮಾಗಳನ್ನು ಮಾಡಿರುವ ಯುವ ನಿರ್ದೇಶಕ ಶ್ರೀಲೇಶ್ ನಾಯರ್ ಈಗೊಂದು ಪಕ್ಕಾ ಕಮರ್ಷಿಯಲ್ ಸಿನಿಮಾ ಮೂಲಕ ಪ್ರೇಕ್ಷಕರ ಎದುರಿಗೆ ಬರಲು ಸಿದ್ಧತೆ ನಡೆಸಿದ್ದಾರೆ. ಅವರ ಹೊಸ ಸಿನಿಮಾ ಹೆಸರು 'ಪೆಪೆ'.

ವಿನಯ್ ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ ಈ ಸಿನಿಮಾಗೆ ಕಾಜಲ್ ಕುಂದರ್ ನಾಯಕಿ. ಈಗಾಗಲೇ ಹತ್ತು ದಿನಗಳ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಕೊರೊನಾ ಆಪತ್ತು ಮುಗಿಯುವುದನ್ನೇ ಕಾಯುತ್ತಿದೆ.

'ಇದೊಂದು ಗ್ಯಾಂಗ್‌ಸ್ಟರ್ ಸಿನಿಮಾ. ಮಲೆನಾಡಿನ ಪ್ರದೇಶದಲ್ಲಿ ನಡೆಯುವ ಕಥೆ. ಹಾಗೆಂದು ರೌಡಿಸಂ ಸಿನಿಮಾ ಅಲ್ಲ. 'ಗ್ಯಾಂಗ್ಸ್ ಆಫ್ ವಾಸ್ಸೆಪುರ್' ಅನ್ನು ರೌಡಿಸಂ ಸಿನಿಮಾ ಎಂದು ಹೇಳಲು ಸಾಧ್ಯವಿಲ್ಲವಲ್ಲ. ಇದೂ ಅದೇ ಬಗೆಯ ಸಿನಿಮಾ' ಎನ್ನುತ್ತಾರೆ ಶ್ರೀಲೇಶ್.

'ನಾನು ಸಿದ್ಧ ಮಾಡಿಕೊಂಡಿರುವ ಕಥೆಗೆ ಒಬ್ಬ ಆಪ್ತ ಅನಿಸುವಂಥ ಹುಡುಗ ಬೇಕಾಗಿತ್ತು. ವಿನಯ್ ರಾಜ್‌ಕುಮಾರ್ ಅವರಿಗೆ ಆ ಬಗೆಯ ಪಕ್ಕದ್ಮನೆ ಹುಡುಗನ ಇಮೇಜ್ ಇದೆ. ಅವರು ಪ್ರೇಕ್ಷಕರ ಜೊತೆಯಲ್ಲಿಯೇ ಇರಬಲ್ಲ ಗುಣ ಹೊಂದಿದ್ದಾರೆ. ಹಾಗಾಗಿ ಅವರೇ ಈ ಸಿನಿಮಾಗೆ ಸೂಕ್ತ ನಾಯಕ ಎಂದು ನಿರ್ಧರಿಸಿದೆ. ಅವರಿಗೆ ಕಥೆ ಹೇಳಿದಾಗ ತುಂಬ ಇಷ್ಟಪಟ್ಟು ಒಪ್ಪಿಕೊಂಡರು' ಎಂದು ಶ್ರೈಲೇಶ್, ಈ ಚಿತ್ರಕ್ಕೆ ವಿನಯ್ ನಾಯಕರಾದ ಬಗೆಯನ್ನು ವಿವರಿಸುತ್ತಾರೆ.




ಚಿತ್ರೀಕರಣದ ಘಟಕದಲ್ಲಿಯೂ ವಿನಯ್ ವರ್ತನೆ ಶ್ರೀಲೇಶ್ ಅವರಿಗೆ ತುಂಬ ಇಷ್ಟವಾಗಿದೆ. 'ಅವರು ಯಾವತ್ತೂ ಇದನ್ನು ಬದಲಿಸಿ, ಅದನ್ನು ಬದಲಿಸಿ ಎಂದು ಕೇಳಿದ್ದಿಲ್ಲ. ನೀವು ಹೇಗೆ ಬೇಕಾದರೂ ಮಾಡಿ. ನೀವು ಹೇಳಿದ ಸಮಯಕ್ಕೆ ಬಂದು ನೀವು ಹೇಳಿದ ಹಾಗೆ ನಟಿಸುತ್ತೇನೆ ಎಂದು ಹೇಳಿದ್ದರು. ಹಾಗಾಗಿ ನನಗೆ ಸಾಕಷ್ಟು ಸ್ವಾತಂತ್ರ್ಯವಿತ್ತು' ಎಂದು ಮೆಚ್ಚುಗೆಯಿಂದ ಮಾತಾಡುತ್ತಾರೆ.

ಮೂವತ್ತು ನಲ್ವತ್ತು ವರ್ಷದ ಕಾಲಮಾನದಲ್ಲಿ ನಡೆಯುವ ಈ ಕಥೆಯಲ್ಲಿ 1990ರಿಂದ 2020ವರೆಗಿನ ಬೇರೆಬೇರೆ ಕಾಲದ ಹೊಂದಾಣಿಕೆ ಇದೆಯಂತೆ. ನಡುನಡುವೆ ಅರವತ್ತು ಎಪ್ಪತ್ತರ ದಶಕದ ಎಳೆಗಳೂ ಬಂದು ಹೋಗುತ್ತವಂತೆ.

'ನಮ್ಮ ಸಿನಿಮಾ ನಡೆಯುವುದು ಮಲೆನಾಡ ಭಾಗದಲ್ಲಿ. ಆದರೆ ಅಲ್ಲಿನ ಭಾಷೆಯನ್ನು ನಾವು ಬಳಸಿಕೊಂಡಿಲ್ಲ. ಒಂದು ಪ್ರಾಂತ್ಯದ ಭಾಷೆಯನ್ನೇ ಸಂಪೂರ್ಣ ಬಳಸಿಕೊಂಡರೆ ಬೇರೆಯವರಿಗೆ ಅದು ಇಷ್ಟವಾಗದೇ ಹೋಗುವ ಅಪಾಯವಿದೆ. ಹಾಗಾಗಿ ಎಲ್ಲರಿಗೂ ಗೊತ್ತಾಗುವ ಸಹಜಕನ್ನಡವನ್ನೇ ಬಳಸಿಕೊಂಡಿದ್ದೇವೆ. ಆದರೆ ಅಲ್ಲಿನ ಸಂಸ್ಕೃತಿಯನ್ನು, ಬದಲಾದ ಕಾಲಕ್ಕೆ ತಕ್ಕ ಹಾಗೆ ಅದು ಬದಲಾಗುತ್ತ ಹೋಗುವುದನ್ನು ಚಿತ್ರದಲ್ಲಿ ಕಾಣಿಸಿಕೊಂಡಿದ್ದೇವೆ' ಎನ್ನುತ್ತಾರೆ ಶ್ರೀಲೇಶ್. ಕಮರ್ಷಿಯಲ್ ಚೌಕಟ್ಟಿನೊಳಗಡೆಯೇ ಸಾಂಸ್ಕೃತಿಕ ಕಥನವನ್ನು ಕಟ್ಟುವ 'ಪೇರುಯೇರುಮ್ ಪೆರುಮಾಳ್' ಮತ್ತು 'ಕರ್ಣಮ್' ಸಿನಿಮಾಗಳು ಶ್ರೀಲೇಶ್ ಅವರಿಗೆ ಮೆಚ್ಚು. ತಮ್ಮ ಸಿನಿಮಾದಲ್ಲಿಯೂ ಅದೇ ರೀತಿಯಲ್ಲಿ ಸಾಂಸ್ಕೃತಿಕ ಕಥನವನ್ನು ಕಮರ್ಷಿಯಲ್ ಮಾದರಿಯ ಆಕರ್ಷಕ ಪೊಟ್ಟಣದಲ್ಲಿ ಕಟ್ಟಿಕೊಡುವ ಸಿದ್ಧತೆಯಲ್ಲಿ ಅವರಿದ್ದಾರೆ. ■